ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಚಿಕ್ಕೋನಹಳ್ಳಿ ಗ್ರಾಮದ ಸಿ.ಎಸ್. ಕರೀಗೌಡರು 'ಭಾರತೀಯ ಆಡಳಿತ ಸೇವೆ'ಯಲ್ಲಿರುವ ಅಧಿಕಾರಿ. ಪ್ರಸ್ತುತ, ಕೇಂದ್ರ ಚುನಾವಣಾ ಆಯೋಗದಲ್ಲಿ 'ಹೆಚ್ಚುವರಿ ಮುಖ್ಯ ಚುನಾವಣಾಧಿಕಾರಿ'. ಗ್ರಾಮೀಣ ಬದುಕಿನ ತವಕತಲ್ಲಣಗಳನ್ನು, ಜನಸಾಮಾನ್ಯರ ಬದುಕಿನ ಕಂಪನಗಳನ್ನು ಸೂಕ್ಷ್ಮವಾಗಿ ಹಿಡಿದಿಡುವ ಸೃಜನಶೀಲಕಥನಶಕ್ತಿ ಅವರದು

ನಾನು, 'ಯಾಕೆ, ನಾವು ನೋಡಿಕೊಳ್ಳುವುದಿಲ್ಲವೆ?' ಎಂದು ಒಮ್ಮೆ ಕೇಳಿದೆ. ಅದಕ್ಕೆ ಅವ್ವ 'ಅದು ನನ್ನ ಜವಾಬ್ದಾರಿ ಮಾತ್ರ. ತಾನು ಮೊದಲು ಸತ್ತರೆ ನೆಮ್ಮದಿಯ ಸಾವು ಎನ್ನಿಸುವುದಿಲ್ಲ. ನನ್ನ ಯಜಮಾನ ನನ್ನ ಸರ್ವಸ್ವ. ಆತನ ಜವಾಬ್ದಾರಿಯನ್ನು ತಾನೇ ನಿಭಾಯಿಸಬೇಕು' ಎನ್ನುತ್ತಾಳೆ. ಅಪ್ಪನಿಗೆ ಹದಿನೈದು ವರ್ಷದಿಂದ ಸಕ್ಕರೆ ಕಾಯಿಲೆ ಹಾಗೂ ಮಂಡಿ ಚಿಪ್ಪಿನ ಸಮಸ್ಯೆ ಇದೆ. ಸ್ವಲ್ಪ ದೂರ ನಡೆದಾಡುವುದೂ ಕಷ್ಟ. ಕೋಲಿನ ಆಸರೆ ಬೇಕು. ಜೊತೆಗೆ ಒಂದು ವರ್ಷದಿಂದ ಮರೆವಿನ ಸಮಸ್ಯೆ. ಅವ್ವ ಎಮ್ಮೆ ಮೇಯಿಸಲು ಹೊರೆಗೆ ಹೋದಾಗ ಅಪ್ಪ ಒಂದೆರಡು ಬಾರಿ ಬೇರೆ ಊರಿಗೆ ಹೋಗಿ ತಪ್ಪಿಸಿಕೊಂಡಿದ್ದ. ಅದೃಷ್ಟವಶಾತ್ ಪರಿಚಯದವರು ನೋಡಿದ್ದರಿಂದ ಮತ್ತೆ ಸಿಕ್ಕಿದ. ಅಂದಿನಿಂದ ಅವ್ವ ಎಮ್ಮೆ ಮೇಯಿಸಲು ಹೊರಗೆ ಹೋದಾಗ ಅಪ್ಪನನ್ನು ಮನೆಯಲ್ಲಿಯೇ ಬಿಟ್ಟು ಗೇಟಿಗೆ ಬೀಗ ಹಾಕಿಕೊಂಡು ಹೋಗುತ್ತಾಳೆ. ಹೋಗುವ ಮುನ್ನ ಊಟೋಪಚಾರ ಮತ್ತು ಸ್ನಾನ ಮಾಡಿಸಿ ಹೋಗುತ್ತಾಳೆ.

ಅಪ್ಪ ಅವ್ವ ಇಬ್ಬರನ್ನೂ ಬೆಂಗಳೂರಿನಲ್ಲಿ ನಮ್ಮೊಡನೆ ಇರುವಂತೆ ಕೇಳಿದರೂ ಒಪ್ಪುವುದಿಲ್ಲ. ಒಮ್ಮೆ ಒಂದು ವಾರ ಇರಲು ಒಪ್ಪಿ ಇಬ್ಬರೂ ಬಂದರು. ಮೊದಲ ದಿನ ಚಟುವಟಿಕೆಯಿಂದ ಇದ್ದರು. ಎರಡನೇ ದಿನಕ್ಕೆ ಗರ ಬಡಿದಂತೆ ಮೌನಕ್ಕೆ ಜಾರಿದರು. ಅವರಿಗೆ ಅವರು ಹುಟ್ಟಿದ ಕಟ್ಟಿದ ಮನೆ, ಬೆಳೆದ ಪರಿಸರ, ಹೊಲ, ಎಮ್ಮೆ ದನಗಳ ಸಾಂಗತ್ಯ, ಮಣ್ಣಿನ ವಾಸನೆ ಜೊತೆಯಲ್ಲಿ ಇದ್ದರಷ್ಟೇ ಗೆಲುವು. ಮೂರನೇ ದಿನಕ್ಕೆ ವಾಪಸ್ ಹಳ್ಳಿಗೆ ಹೋದರು. ಹಳ್ಳಿಯಲ್ಲಿ ಮತ್ತೆ ಜೀವ ಕಳೆ ಮರುಳಿತು. ಅಂದಿನಿಂದ ಊರು ಬಿಟ್ಟು ಬೆಂಗಳೂರಿನಲ್ಲಿ ನಮ್ಮೊಡನೆ ಇರುವಂತೆ ಒತ್ತಾಯಿಸಿಲ್ಲ.

ಹದಿನೈದು ದಿನದ ಹಿಂದೆ ಕಣ್ಣಿನ ಪರೀಕ್ಷೆಗಾಗಿ ನಾರಾಯಣ ನೇತ್ರಾಲಯಕ್ಕೆ ಹೋಗಿದ್ದೆ. ಪುನೀತ್ ರಾಜ್‌ಕುಮಾರ್ ನಿಧನದ ನಂತರ ನೇತ್ರದಾನದಿಂದ ಪ್ರೇರಣೆಗೊಂಡ ನಾನು ಮತ್ತು ಸ್ನೇಹಿತ ಲೋಹಿತ್ ನೇತ್ರದಾನಕ್ಕೆ ನೋಂದಣಿ ಮಾಡಿಸಿದೆವು. ಸತ್ತ ನಂತರ ದೇಹದಾನಕ್ಕೆ ಅನುಸರಿಸಬೇಕಾದ ಪ್ರಕ್ರಿಯೆಗಳ ಬಗ್ಗೆ ಮಾಹಿತಿ ಪಡೆದುಕೊಂಡು ನಂತರ ದೇಹದಾನಕ್ಕೆ ನಿರ್ಧರಿಸಿದೆವು.

ಕಳೆದ ವಾರ ಊರಿಗೆ ಹೋಗಿದ್ದಾಗ ಅವ್ವನಿಗೆ ನನ್ನ ನೇತ್ರದಾನ ಮತ್ತು ದೇಹದಾನದ ಬಗ್ಗೆ ಹೇಳಿದೆ. ಅಪ್ಪ ಒಮ್ಮೆಯೂ ಆಸ್ಪತ್ರೆಯಲ್ಲಿ ತನ್ನ ಮೈಮೇಲೆ ಕತ್ತರಿ–ಬ್ಲೇಡು ಆಡಿಸಿಕೊಂಡಿಲ್ಲ. ಕುಯ್ಯಿಸಿಕೊಂಡ ಅನುಭವವಿಲ್ಲ. ಹೀಗಾಗಿ 'ನೋವಾಗುವುದಿಲ್ಲವೆ' ಎಂದರು. ಸತ್ತ ಮೇಲೆ ನೋವು–ನಲಿವು ಏನೂ ಇಲ್ಲವೆಂದು ನಕ್ಕಾಗ ಸಂಪ್ರದಾಯಸ್ಥ ಮತ್ತು ಅನಕ್ಷರಸ್ತರಾದ ಅಪ್ಪ–ಅವ್ವ ಇಬ್ಬರೂ ನೇತ್ರದಾನ ಮತ್ತು ದೇಹದಾನಕ್ಕೆ ಒಪ್ಪಿಕೊಂಡರು. ಅವ್ವ 'ಸುಟ್ಟು ಬೂದಿಯಾಗುವ ಬದಲು ಬೇರೊಬ್ಬರಿಗೆ ಉಪಯೋಗವಾಗುವುದಾದರೆ ಆಗಲೀ, ನನ್ನ ಪುಣ್ಯ' ಎಂಬ ಧನ್ಯತೆಯ ಮಾತನ್ನಾಡಿದಳು. ಮುಂದಿನ ಸಾರಿ ಬೆಂಗಳೂರಿಗೆ ಬಂದಾಗ ಅಪ್ಪ–ಅವ್ವ ಇಬ್ಬರೂ ನೇತ್ರದಾನ ಮತ್ತು ದೇಹದಾನ ಪ್ರಕ್ರಿಯೆಗೆ ಅರ್ಜಿ ಸಲ್ಲಿಸಲು ತೀರ್ಮಾನಿಸಿದರು.

ಅವ್ವ–ಅಪ್ಪನದು ಎರಡು ದೇಹ, ಒಂದು ತಲೆ, ಒಂದೇ ಆತ್ಮದ ಸಯಾಮಿ ಅವಳಿಗಳಂತೆ ಒಬ್ಬರನ್ನೊಬ್ಬರು ಬಿಟ್ಟಿರಲಾರದ ಅಪೂರ್ವ ದಾಂಪತ್ಯ. ಅದನ್ನು ಪದಗಳಲ್ಲಿ ವರ್ಣಿಸಲು ಅಸಾಧ್ಯ. ಮುದ್ದಣ್ಣ ಮನೋರಮೆಯರ ಸರಸ–ಸಲ್ಲಾಪದಂತೆ ಅಭಿವ್ಯಕ್ತಗೊಳಿಸುವುದು ಕಷ್ಟ. ಅನುಭೂತಿ ಮಾತ್ರ ಸಾಧ್ಯ. ವೃದ್ಧ ಪ್ರಣಯಿಗಳ ನಿಷ್ಕಲ್ಮಶ ಪ್ರೇಮ, ಪರಸ್ಪರ ಅವಲಂಬನೆ, ಆದರ್ಶನೀಯ ಮತ್ತು ಅನುಕರಣೀಯ.

●